1994-95ನೇ ಸಾಲಿನ ಅಂದಾಜು ಆದಾಯ ಮತ್ತು ವೆಚ್ಚ

2654 - ಶ್ರೀ ಉಜನೇಶ್ವರ್ ಬಣಕಾರ್ (ಹಿರೇಕೆರೂರ) : ಮಾನ್ಯ ಹಣಕಾಸು ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1994-95ನೇ ಸಾಲಿನ ಆಯವ್ಯಯ ಪ್ರಕಾರ ವಾಸ್ತವಿಕ ಅಂದಾಜು ಆದಾಯ ಹಾಗೂ ವೆಚ್ಚವೆಷ್ಟು?

ಆ) 1994-95ನೇ ಸಾಲಿನ ಮೊದಲ ಎಂಟು ತಿಂಗಳ ಅಂದರೆ 1-4-94 ರಿಂದ 30-11-94 ವರೆಗೆ ಹಾಗೂ ಕೊನೆಯ ನಾಲ್ಕು ತಿಂಗಳು ಅಂದರೆ 1-12-94 ರಿಂದ 31-3-95 ವರೆಗಿನ ಪ್ರತ್ಯೇಕ ವಾಸ್ತವಿಕ ಆದಾಯ ಹಾಗೂ ವೆಚ್ಚವೆಷ್ಟು?

ಇ) 1995-96ನೇ ವರ್ಷದ ಮೊದಲ ನಾಲ್ಕು ತಿಂಗಳು ಅಂದರೆ 1-4-95 ರಿಂದ 31-7-95ರ ವರೆಗಿನ ವಾಸ್ತವಿಕ ಆದಾಯ ಹಾಗೂ ವೆಚ್ಚದ ಮೊತ್ತವೆಷ್ಟು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಮಂತ್ರಿಗಳು):

ಅ)

		(ರೂ. ಕೋಟಿಗಳಲ್ಲಿ)
1994-95 ರಾಜಸ್ವ ಬಜೆಟ್	-	11126.71
ರಾಜಸ್ವ ಪರಿಷ್ಕೃತ	-	10731.90
1994-95 ವೆಚ್ಚ-ಬಜೆಟ್	-	11603.99
ವೆಚ್ಚ-ಪರಿಷ್ಕೃತ	-	11001.33

1994-95 ಮತ್ತು 1-4-95 ರಿಂದ 31-7-95ರ ವರೆಗಿನ ಅಂತಿಮ ಲೆಕ್ಕವು ಇದುವರೆವಿಗೂ ಮಹಾಲೇಖಪಾಲರಿಂದ ಬಂದಿರುವುದಿಲ್ಲ. ಆದಾಗ್ಯೂ ಈ ಕೆಳಕಂಡ ಅಂಕಿ ಅಂಶಗಳನ್ನು ಮಹಾಲೇಖಪಾಲರು ಕರ್ನಾಟಕ ಬೆಂಗಳೂರು ಇವರು ಕಳುಹಿಸಿರುವ ಪ್ರಾರಂಭಿಕ ಮಾಹಿಯಾನ ಲೆಕ್ಕದ ವರದಿಯ ಆಧಾರದ ಮೇಲೆ ಕೊಡಲಾಗಿದೆ. ಈ ಅಂಕಿಅಂಶಗಳು ಬದಲಾವಣೆಗೆ ಒಳಪಟ್ಟಿದೆ.

(ರೂ. ಕೋಟಿಗಳಲ್ಲಿ)

ತಿಂಗಳು	ಆದಾಯ	ವೆಚ್ಚ
ಏಪ್ರಿಲ್ 94	592.89	404.61
ಮೇ 94	551.47	594.12
ಜೂನ್ 94	522.69	612.82
ಜುಲೈ 94	680.49	642.74
ಆಗಸ್ಟ್ 94	817.89	766.51
ಸೆಪ್ಟೆಂಬರ್ 94	730.70	758.41
ಆಕ್ಟೋಬರ್ 94	755.21	780.30
ನವಂಬರ್ 94	924.18	782.01
	5575.52	5341.52
ಡಿಸೆಂಬರ್ 94	769.47	867.23

ಜನವರಿ 95	965.98	660.87
ಫೆಬ್ರವರಿ 95	793.11	677.22
ಮಾರ್ಚ್ 95	1516.43	2295.88
	4044.99	4501.20
ಒಟ್ಟು	9620.51	9842.72
ಎಪ್ರಿಲ್ 95	455.02	207.71
ಮೇ 95	776.81	513.07
ಒಟ್ಟು	1231.83	720.78

ಜೂನ್ ತಿಂಗಳಿನಿಂದ ಸಾಮಾನ್ಯ ಲೆಕ್ಕ ವರದಿಗಳು ಮಹಾಲೇಖಪಾಲರಿಂದ ಸ್ವೀಕೃತವಾಗಿರುವುದಿಲ್ಲ.

ಮಾಗಡಿ ತಾಲ್ಲೂಕಿನ ನೀರಾವರಿ ಡ್ಯಾಂಗಳು

2208 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಐದು ವರ್ಷಗಳಿಂದ ಮಾಗಡಿ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿರುವ ನೀರಾವರಿ ಡ್ಯಾಂಗಳಾವುವು?

ಆ) ಈ ನೀರಾವರಿ ಡ್ಯಾಂಗಳ ರೂಪುರೇಶೆಗಳೇನು? ಹಾಗೂ ಉದ್ದೇಶಿತ ಹಣದ ಮೊತ್ತವೇನು?

ಇ) ಈಗ ಈ ನೀರಾವರಿ ಡ್ಯಾಂಗಳ ಕಾರ್ಯ ಯಾವ ಹಂತದಲ್ಲಿದೆ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಕೆಳಕಂಡ ಸಣ್ಣ ನೀರಾವರಿ ಯೋಜನೆಗಳು

(1) ವೈ.ಜಿ. ಗುಡ್ಡ (2) ಶ್ರೀರಂಗ ಅಣೆಕಟ್ಟು (3) ರಂಗಮಾರೇನಕಲ್ (4) ರಂಗಪ್ಪ ಡ್ಯಾಂ

ಹೆಸರು	ಉದ್ದೇಶಿತ ಅಚ್ಚುಕಟ್ಟು (ಹೆಕ್ಟೇರ್‌ಗಳಲ್ಲಿ)	ಅಂದಾಜು ಮೊತ್ತ (ಲಕ್ಷ ರೂ.ಗಳಲ್ಲಿ)
1) ವೈ.ಜಿ. ಗುಡ್ಡ ಕೆರೆ	800	4035
2) ಶ್ರೀರಂಗ ಅಣೆ	110	41
3) ರಂಗಮಾರೇನಕಲ್ ಕೆರೆ	480	200
4) ರಂಗಪ್ಪ ಡ್ಯಾಂ	800	200

ಇ)1)ವೈ.ಜಿ. ಗುಡ್ಡ ಕೆರೆಯ ಏರಿಯ ಕೆಲಸ ಮುಗಿಯುವ ಹಂತದಲ್ಲಿದೆ. ಕಾಲುವೆಯ ಕಾಮಗಾರಿಗಳು ಪ್ರಾರಂಭವಾಗಿದೆ.